2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ,
ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ 29/2023

| | | |
|---|---|---|
| ಸಾಕ್ಷಿದಾರರ ಹೆಸರು | - ಜಿ ತಿಪ್ಪೇಶ್ | ಪಿಡಬ್ಲೂ - 12 |
| ತಂದೆಯ ಹೆಸರು | - ಗುರುಸಿದ್ದಪ್ಪ | ಸಿಡಬ್ಲೂ -36 |
| ವಯಸ್ಸು | - 40 ವರ್ಷ | |
| ಉದ್ಯೋಗ | - ಹೆಚ್ ಸಿ 150, ವೃತ್ತ ನಿರೀಕ್ಷಕರ ಕಛೇರಿ, ಕೊಪ್ಪ | |
| ವಾಸ ಸ್ಥಳ | - ಕೊಪ್ಪ | |

ದಿನಾಂಕಃ 10-04-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

1. ನಾನು ದಿನಾಂಕ 29.12.2022 ರಿಂದ ಕೊಪ್ಪ ವೃತ್ತ ನಿರೀಕ್ಷಕರ ಕಛೇರಿಯಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.
2. ದಿನಾಂಕ 16.11.2022, ದಿನಾಂಕ 17.11.2022 ಮತ್ತು ದಿನಾಂಕ 29.11.2022 ರಂದು ಈ ಪ್ರಕರಣದ ತನಿಖಾ ಕಾಲದಲ್ಲಿ ತನಿಖಾಧಿಕಾರಿಗಳಾದ ಪ್ರಾಸಾ.9 ರವರು ಸೂಚಿಸಿದ ಮೇರೆಗೆ ಅವರ ಮೊಬೈಲ್ ನಲ್ಲಿ ಫೋಟೋಗಳನ್ನು ತೆಗೆದಿರುತ್ತೇನೆ.
3. ದಿನಾಂಕ 13.02.2023 ರಂದು ಪ್ರಾಸಾ.9 ರವರು ಪ್ರಾಸಾ.3 ರವರ ಹೇಳಿಕೆಯನ್ನು ದಾಖಲು ಮಾಡಿಕೊಂಡಿದ್ದು ಆ ಸಮಯದಲ್ಲಿ ನಾನು ತನಿಖಾಧಿಕಾರಿಗಳಾದ ಪ್ರಾಸಾ.9 ರವರು ಸೂಚನೆಯ ಮೇರೆಗೆ ನನ್ನ ಮೊಬೈಲ್ ನಲ್ಲಿ ವೀಡಿಯೋ ಮಾಡಿರುತ್ತೇನೆ.
4. ನಂತರ ತನಿಖಾಧಿಕಾರಿಗಳ ಸೂಚನೆಯ ಮೇರೆಗೆ ಮೇಲೆ

ಹೇಳಿದಂತೆ ಅವರ ಮೊಬೈಲ್ ನಲ್ಲಿ ತೆಗೆದಿದ್ದ ಫೋಟೋಗಳನ್ನು ಮತ್ತು ನನ್ನ ಮೊಬೈಲ್ ನಲ್ಲಿ ಮಾಡಿಕೊಂಡಿದ್ದ ವೀಡಿಯೋವನ್ನು ವೃತ್ತ ಕಛೇರಿಗೆ ಒದಗಿಸಲಾಗಿದ್ದ ಹೆಚ್ ಪಿ ಕಂಪೆನಿಯ ಕಂಪ್ಯೂಟರ್ ಗೆ ಯಥಾಸ್ಥಿತಿಯಲ್ಲಿ ವರ್ಗಾಯಿಸಿ ನಂತರ ಸದರಿ ಫೋಟೋಗಳನ್ನು ಮತ್ತು ವೀಡಿಯೋವನ್ನು ಎರಡು ಖಾಲಿ ಸಿಡಿಗಳಿಗೆ ಯಥಾಸ್ಥಿತಿಯಲ್ಲಿ ವರ್ಗಾಯಿಸಿ ತನಿಖಾಧಿಕಾರಿಗಳಿಗೆ ನೀಡಿರುತ್ತೇನೆ. ನಂತರ ಆ ಬಗ್ಗೆ ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 65 ಬಿ ರಡಿಯಲ್ಲಿ ತನಿಖಾಧಿಕಾರಿಗಳಿಗೆ ದೃಢೀಕರಣ ಪತ್ರವನ್ನು ನೀಡಿರುತ್ತೇನೆ. ಸದರಿ ದೃಢೀಕರಣ ಪತ್ರವನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ.48 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.48(ಬಿ) ಎಂದು ಗುರುತಿಸಲಾಯಿತು.

5. ಮೇಲೆ ಹೇಳಿದಂತೆ ತನಿಖಾಧಿಕಾರಿಗಳ ಆದೇಶದ ಮೇರೆಗೆ ಫೋಟೋಗಳನ್ನು ಮತ್ತು ವೀಡಿಯೋವನ್ನು ವರ್ಗಾಯಿಸಿದ ಸಿಡಿಗಳನ್ನು ನೋಡುತ್ತಿದ್ದು ಅವುಗಳನ್ನು ಈಗಾಗಲೇ ನಿಪಿ.46 ಮತ್ತು ನಿಪಿ.47 ಎಂದು ಗುರುತಿಸಲಾಗಿರುತ್ತದೆ. ಸದರಿ ಫೋಟೋಗಳನ್ನು ನೋಡುತ್ತಿದ್ದು, ಅವುಗಳನ್ನು ಈಗಾಗಲೇ ನಿಪಿ.3 ರಿಂದ 6, 11 ರಿಂದ 20, 36 ಮತ್ತು ನಿಪಿ.37 ಎಂದು ಗುರುತಿಸಲಾಗಿರುತ್ತದೆ.

6. ಸದರಿ ಫೋಟೋಗಳನ್ನು ತೆಗೆಯುವ ಸಮಯದಲ್ಲಿ ಪ್ರಾಸಾ.9 ರವರ ಮೊಬೈಲ್ ಮತ್ತು ನನ್ನ ಮೊಬೈಲ್ ಸುಸ್ಥಿತಿಯಲ್ಲಿ ಇತ್ತು ಮತ್ತು ಅವುಗಳನ್ನು ಮೇಲೆ ಹೇಳಿದಂತೆ ವರ್ಗಾಯಿಸಿದ

ಕಂಪ್ಯೂಟರ್ ಸಹ ಸುಸ್ಥಿತಿಯಲ್ಲಿ ಇತ್ತು.

7. ನನಗೆ ಫೋಟೋಗಳನ್ನು ತೆಗೆಯುವ ಬಗ್ಗೆ ಮತ್ತು ಅವುಗಳನ್ನು ಕಂಪ್ಯೂಟರ್ ಗೆ ವರ್ಗಾಯಿಸುವ ಬಗ್ಗೆ ಮತ್ತು ಕಂಪ್ಯೂಟರ್ ನಿಂದ ಸಿಡಿಗೆ ವರ್ಗಾಯಿಸುವ ಬಗ್ಗೆ ಪರಿಣಿತಿ ಇರುತ್ತದೆ. ಇಲಾಖಾ ವತಿಯಿಂದ ನನಗೆ ಕಂಪ್ಯೂಟರ್ ಬಗ್ಗೆ ತರಬೇತಿಯನ್ನು ನೀಡಲಾಗಿರುತ್ತದೆ ಮತ್ತು ನಾನು ಕಂಪ್ಯೂಟರ್ ಲಿಟರೆಸಿ ಟೆಸ್ಟ್‌ನಲ್ಲಿ ತೇರ್ಗಡೆ ಹೊಂದಿರುತ್ತೇನೆ.

<u>ಪಾಟೀ ಸವಾಲುಃ **LADCS** ನ **Deputy Chief Defense counsel** ಆದ ಶ್ರೀ ಎನ್ ಡಿ ವಕೀಲರಿಂದಃ ಆರೋಪಿ ಪರವಾಗಿಃ</u>

8. ಸಾಮಾನ್ಯವಾಗಿ ಮೊಬೈಲ್ ನಲ್ಲಿ ಫೋಟೋಗಳನ್ನು ತೆಗೆದರೆ ಅವುಗಳ ಮೇಲೆ ಅವುಗಳನ್ನು ತೆಗೆದ ದಿನಾಂಕ ಮತ್ತು ಸಮಯ ನಮೂದಾಗುವ ವ್ಯವಸ್ಥೆ ಇದೆ ಎಂದರೆ ಸಾಕ್ಷಿ ಆ ಬಗ್ಗೆ ಸೆಟ್ಟಿಂಗ್ ಮಾಡಿಕೊಂಡರೆ ಬರುತ್ತದೆ ಎನ್ನುತ್ತಾರೆ. ನಿಮಗೆ ಆ ಬಗ್ಗೆ ಮೊಬೈಲ್ ನಲ್ಲಿ ಸೆಟ್ ಮಾಡಿಕೊಳ್ಳಲು ತೊಂದರೆ ಇತ್ತೇ ಎಂದರೆ ಸಾಕ್ಷಿ ತನಿಖಾಧಿಕಾರಿಗಳು ತಮ್ಮ ಮೊಬೈಲ್ ಅನ್ನು ಕೊಟ್ಟ ರೀತಿ ಫೋಟೋಗಳನ್ನು ತೆಗೆದಿದ್ದೇನೆ ಎನ್ನುತ್ತಾರೆ.

9. ಫ್ರಾಸಾ.9 ರವರ ಮೊಬೈಲ್ ಯಾವ ಕಂಪೆನಿಯದ್ದು ಮತ್ತು ಯಾವ ಮಾಡೆಲ್ ನದ್ದು ಎಂದು ನಿಪಿ.48 ರಲ್ಲಿ ನಮೂದು ಮಾಡಿಲ್ಲ ಎಂದರೆ ಸರಿ. ಸದರಿ ಮೊಬೈಲ್ ಸುಸ್ಥಿತಿಯಲ್ಲಿತ್ತು ಎಂದು ನಿಪಿ.48 ರಲ್ಲಿ ನಮೂದು ಮಾಡಿಲ್ಲ ಎಂದರೆ ಸರಿ. ಸದರಿ ಮೊಬೈಲ್ ನ ಕೆಪಾಸಿಟಿ ಎಷ್ಟಿತ್ತು ಮತ್ತು ಎಷ್ಟು

ಬಳಕೆಯಾಗಿತ್ತು ಎಂದು ನಿಪಿ.48 ರಲ್ಲಿ ನಮೂದು ಮಾಡಿಲ್ಲ ಎಂದರೆ ಸರಿ. ಫೋಟೋಗಳನ್ನು ತೆಗೆದ ರೆಸಲ್ಯೂಷನ್ ಎಷ್ಟಿತ್ತು ಎಂದು ನಿಪಿ.48 ರಲ್ಲಿ ನಮೂದು ಮಾಡಿಲ್ಲ ಎಂದರೆ ಸರಿ.

10. ಒಪ್ಪೋ ಕಂಪೆನಿಯ ಯಾವ ಮಾಡೆಲ್ ನ ಮೊಬೈಲ್ ನಲ್ಲಿ ವೀಡಿಯೋವನ್ನು ಮಾಡಲಾಗಿದೆ ಎಂದು ನಿಪಿ.48 ರಲ್ಲಿ ನಮೂದು ಮಾಡಿಲ್ಲ ಎಂದರೆ ಸರಿ. ನೀವು ಹೇಳಿದಂತೆ ಯಾವುದೇ ಫೋಟೋಗಳನ್ನು ತೆಗೆದಿಲ್ಲ ಮತ್ತು ವೀಡಿಯೋವನ್ನು ಮಾಡಿಲ್ಲ ಎಂದರೆ ಸರಿಯಲ್ಲ.

11. ಫೋಟೋ ಫ್ಲಾಶ್ ಎಡಿಟಿಂಗ್ ಸಾಫ್ಟ್ ವೇರ್ ಬಗ್ಗೆ ನನಗೆ ತಿಳಿದಿದೆ. ನೀವು ಗುರುತಿಸಿದ ಫೋಟೋಗಳನ್ನು ಮತ್ತು ದಾಖಲೆಗಳನ್ನು ಸೃಷ್ಟಿಸಿ ತನಿಖಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನೀವು ಹೇಳಿದಂತೆ ತನಿಖಾ ಸಮಯದಲ್ಲಿ ಸ್ಥಳಕ್ಕೆ ಹೋಗಿಲ್ಲ ಮತ್ತು ಫೋಟೋಗಳನ್ನು ತೆಗೆದಿಲ್ಲ ಎಂದರೆ ಸರಿಯಲ್ಲ.

12. ನೀವು ಹೇಳಿದಂತೆ ಯಾವುದೇ ಫೋಟೋಗಳನ್ನು ತೆಗೆದಿಲ್ಲ, ವೀಡಿಯೋವನ್ನು ಮಾಡಿಕೊಂಡಿಲ್ಲ, ಅವುಗಳನ್ನು ಕಂಪ್ಯೂಟರ್ ಮತ್ತು ಸಿಡಿಗಳಿಗೆ ವರ್ಗಾಯಿಸಿಲ್ಲ ಎಂದರೆ ಸರಿಯಲ್ಲ. ಸದರಿ ಫೋಟೋಗಳಿಗೂ, ಸಿಡಿಗಳಿಗೂ ಮತ್ತು ನಿಪಿ.48 ಕ್ಕೂ ಆರೋಪಿಗೂ ಯಾವುದೇ ಸಂಬಂದವಿಲ್ಲ ಎಂದರೆ ಸರಿಯಲ್ಲ.

13. ಫೋಟೋಗಳನ್ನು ತೆಗೆಯಲು ಮತ್ತು ಅವುಗಳನ್ನು ಕಂಪ್ಯೂಟರ್ ಮತ್ತು ಸಿಡಿಗೆ ವರ್ಗಾಯಿಸಲು ನಿಮಗೆ ಯಾವುದೇ

ಪರಿಣಿತಿ ಇಲ್ಲ ಎಂದರೆ ಸರಿಯಲ್ಲ. ನಿಮಗೆ ಆ ರೀತಿ ಯಾವುದೇ ಪರಿಣಿತಿ ಇಲ್ಲದಿದ್ದರೂ ಸಹ ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-

(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ

ಹೆಚ್